**MVC 2847/2016**
**C/w 2848, 2850 and 2852/2026**
**PW-2.**



**ದಿನಾಂಕಃ 16.02.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ–** 2ನೇ ಎದುರುದಾರ ಪರ ಶ್ರೀ M.Y.S. ವಕೀಲರಿಂದಃ–

1) ನಾನು 9ನೇ ತರಗತಿಯವರೆಗೆ ಓದಿದ್ದೇನೆ. ನನಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿ. ಅರ್ಜಿ ಹಾಗೂ ಪ್ರಮಾಣಪತ್ರದಲ್ಲಿ ಇಂಗ್ಲಿಷನಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸಲ್ಲಿಸಿದ ಕೇಸ ಕುರಿತು ನಮ್ಮ ವಕೀಲರ ಬಳಿಯಿಂದ ಮಾಹಿತಿ ಪಡೆಯುತ್ತಿದ್ದೆ. ನಾವು ಉದ್ದೇಶಪೂರ್ವಕವಾಗಿ ಈ ಪ್ರಕರಣದಲ್ಲಿ 8 ವರ್ಷ ತಡವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಅದಕ್ಕೂ ಮುಂಚೆ ನನಗೆ ಸಾಕ್ಷಿ ನುಡಿಯಲು ತೊಂದರೆ ಇರಲಿಲ್ಲ ಎಂದರೆ ಸರಿ. ಅಪಘಾತ ಕಾಲಕ್ಕೆ ಊರಿಗೆ ಬರಲು ಅಪಘಾತ ಸ್ಥಳದಲ್ಲಿ ನಿಂತಿದ್ದೆ. ಗಾಡಿ ಬರುತ್ತಿದ್ದಾಗ ನಮಗೆ ಸರಿಯಿರಿ ಸರಿಯಿರಿ ಅಂತಾ ಹೇಳಿದರು ಎಂದರೆ ಸರಿಯಲ್ಲ. ಎದುರುಗಾರರ ಗಾಡಿ ಬರುವುದನ್ನು ನೋಡಿ ನಾನು ಬದಿಗೆ ಸರಿಯಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಬದಿಯಲ್ಲಿಯೇ ಇದ್ದೆ ಎಂದು ನುಡಿಯುತ್ತಾರೆ. ಗಾಡಿ ಬರುವುದನ್ನು ಸುಮಾರು 30–40 ಅಡಿ ಅಂತರದಿಂದ ನೋಡಿದೆ. ಅಷ್ಟು ದೂರದಿಂದ ಎದುರುಗಾರರ ಗಾಡಿ ಬರುವುದನ್ನು ನೋಡಿ ನಾನು ಬದಿಗೆ ಸರಿದಿದ್ದರೆ ಈ ಅಪಘಾತ ಸಂಭವಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನೊಂದಿಗೆ 4 ಜನ ಇದ್ದರು.

ಸಂತ ತನಪುರೆ ಮಹಾರಾಜ ಮಠ ಖಾಸಗಿ ಮಠ ಎಂದರೆ ಸರಿ. ನಾನು ಹಾಗೂ ಇತರೇ ಗಾಯಾಳುಗಳು ನಿಂತ ಜಾಗೆ ಖಾಸಗಿ ಮಠದ ಜಾಗೆಯಾಗಿದ್ದು, ಸಾರ್ವಜನಿಕರು ಅಲ್ಲಿ ನಿಲ್ಲಲು ಅವಕಾಶ ಇರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಉತ್ತರಿಸುವುದಿಲ್ಲ. ರಿವರ್ಸ ಬರುವಾಗ ಜಾಗ ಕಡಿಮೆ ಇದ್ದರಿಂದ ಗಾಡಿ ನಿಧಾನವಾಗಿ ಹಿಂದೆ ಬರುತ್ತಿತ್ತು ಎಂದರೆ ಸರಿಯಲ್ಲ.

2) ಅಪಘಾತದಿಂದಾಗಿ ನನ್ನ ಕಾಲು ಮುರಿಯಿತು. ನನ್ನ ಎಡಗೈ ಭುಜದ ಹತ್ತಿರ ಗಾಯಗಳಾದವು. ಅಪಘಾತವಾದ ನಂತರ ಫಂಡರಪುರಕ್ಕೆ ಹೋಗಿ 5 ದಿನಗಳ ಕಾಲ ಚಿಕಿತ್ಸೆ ಪಡೆದೆನು. ಅದಾದ ನಂತರ ನಿಪ್ವಾಣಿಗೆ ಬಂದು ಚಿಕಿತ್ಸೆ ಪಡೆದೆನು. ಅಲ್ಲಿ ಒಂದು ವಾರ ಚಿಕಿತ್ಸೆ ಪಡೆದೆನು. ಆ ಎರಡೂ ಆಸ್ಪತ್ರೆಗಳಲ್ಲಿ ನನಗೆ ಒಳ್ಳೆ ಚಿಕಿತ್ಸೆ ಕೊಟ್ಟರು ಎಂದರೆ ಸರಿ. ಅಲ್ಲಿ ನನಗೆ ಸಂಪೂರ್ಣ ಹುಷಾರ ಆದ ಮೇಲೆ ಮನೆ ಹೋಗು ಅಂತಾ ಕಳುಹಿಸಿದರು ಎಂದರೆ ಸರಿ. ನನಗಾದ ಗಾಯಗಳು ಸಾದಾಸ್ವರೂಪದ ಗಾಯಗಳು ಎಂದರೆ ಸರಿಯಲ್ಲ. ನನ್ನ ವೈದ್ಯೋಪಚಾರಕ್ಕೆ 50,000/- ರೂ. ಖರ್ಚು ಮಾಡಿದ ಬಗ್ಗೆ ದಾಖಲೆ ನೀಡಿಲ್ಲ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ಅಷ್ಟು ಮೊತ್ತದ ದಾಖಲೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ನಿಖರವಾದ ವಯಸ್ಸು ತೋರಿಸಲು ಶಾಲಾ ದಾಖಲೆ ಹಾಗೂ ಆಧಾರ ಕಾರ್ಡ ಹಾಜರು ಪಡಿಸಲು ಅಡಚಣೆ ಇಲ್ಲ ಎಂದರೆ

ಸರಿ. ಅಪಘಾತ ಕಾಲಕ್ಕೆ ನನಗೆ 18 ವರ್ಷ ಪೂರ್ತಿಯಾಗಿರಲಿಲ್ಲ.

3) ಅಪಘಾತಕ್ಕಿಂತ ಪೂರ್ವದಲ್ಲಿ ನಾನು ಹಾಲು ಮಾರಾಟ ಮಾಡಿ ತಿಂಗಳಿಗೆ 10,000/- ರೂ. ಹಾಗೂ ಕೂಲಿಯಿಂದ 10,000/- ರೂ. ಗಳಿಸುತ್ತಿದ್ದ ಬಗ್ಗೆ ದಾಖಲೆ ನೀಡಿಲ್ಲ ಎಂದರೆ ಸರಿ. ಆ ರೀತಿ ನನಗೆ ಯಾವುದೇ ಆದಾಯ ಇರದ ಕಾರಣ ದಾಖಲೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು 18 ವರ್ಷಕ್ಕಿಂತ ಕಡಿಮೆ ವಯಸ್ಸಿನವನಾಗಿದ್ದರಿಂದ ಅಪಘಾತ ಕಾಲಕ್ಕೆ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಹಾಗೂ ಆದಾಯ ಹೊಂದಿರಲಿಲ್ಲ ಎಂದರೆ ಸರಿಯಲ್ಲ.

4) ಅಪಘಾತವಾದ ಎಷ್ಟು ದಿನಗಳ ನಂತರ ಅಂಗನ್ಯೂನತೆ ಪ್ರಮಾಣಪತ್ರ ಪಡೆದು ಹಾಜರು ಪಡಿಸಿದ್ದೇನೆ ಅಂತಾ ಹೇಳಲು ಬರುವುದಿಲ್ಲ.

5) ಅಪಘಾತ ಖಾಸಗಿ ಸ್ಥಳದಲ್ಲಿ ಆಗಿದ್ದರಿಂದ ಎದುರುಗಾರರು ನನಗೆ ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದಾಗ ಗಾಯಗಳಿಗೆ ಸರಿಯಾಗಿ ಚಿಕಿತ್ಸೆ ನೀಡಿದ್ದರಿಂದ ನಾನು ಸಂಪೂರ್ಣ ಗುಣಮುಖನಾಗಿದ್ದು ಮೊದಲಿನಂತೆ ಕೆಲಸ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. 1ನೇ ಎದುರುಗಾರ ವಿಮಾ ಕಂಪನಿಯವರ ಷರತ್ತು

ಉಲ್ಲಂಘಿಸಿದ್ದರಿಂದ 2ನೇ ಎದುರುಗಾರರು ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ–** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು ಹಾಗೂ ಸದಸ್ಯರು
ವಾಹನ ಅಪಘಾತ ಹಕ್ಕು ನ್ಯಾಯಾಧೀಕರಣ
ಚಿಕ್ಕೋಡಿ.